ಸಾಕ್ಷಿಯನ್ನು ಕರೆಯಿಸಿ. ಪ್ರಮಾಣ ವಚನ ಬೋಧಿಸಿತು. ದಿನಾಂಕಃ 10.08.2017

ಪಾಟೀಸವಾಲುಃ ಬಿಎಂಎಂ ವಕೀಲರಿಂದ

ನನ್ನ ಹೆಂಡತಿಯ ಸ್ವಂತ ಊರು ವೈ.ಕೆ. ಮೋಳೆ. ನಮಗೆ ದಾವಾ ಸ್ವತ್ತುಗಳ ಮೇಲೆ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ನನ್ನ ಮಕ್ಕಳ ಒತ್ತಾಯದ ಮೇರೆಗೆ ದಾವೆ ಹಾಕಿದ್ದೇನೆ ಎಂದರೆ ನನ್ನ ಮಕ್ಕಳು ಹಿಂಸೆಮಾಡಿದ್ದರಿಂದಲೂ ನನ್ನ ಸ್ವಂತ ಬುದ್ದಿಯಿಂದಲೂ ದಾವೆ ಹಾಕಿದ್ದೇನೆ. ನನ್ನ ತಂದೆ ತಾಯಿ ಇಬ್ಬರೂ ಒಂದೇ ಊರಿನ ವಾಸಿಗಳು ಎಂದರೆ ಸರಿ. ನನ್ನ ತಾಯಿ ಹೆಸರು ತಿಮ್ಮನಂಜಮ್ಮ ಎಂದರೆ ಸರಿ. ನನ್ನ ತಾಯಿ ತಿಮ್ಮಮ್ಮ ಮತ್ತು ನಂಜಯ್ಯ ಉಃ ಬಾತಿನ ನಂಜಯ್ಯನ ಒಬ್ಬಳೇ ಮಗಳು ಎಂದರೆ ಸರಿ. ನನ್ನ ಅಜ್ಜಿ ತಿಮ್ಮಮ್ಮ ಕೂಡ ಆಕೆಯ ತಂದೆ ತಾಯಿಗೆ ಒಬ್ಬಳೇ ಮಗಳಾಗಿದ್ದಳು ಎಂದರೆ ಸರಿ. ಅಜ್ಜಿ ತಿಮಮ್ಮನ ತಾಯಿ ಕೆಂಪಮ್ಮನಿಗೆ ಯಾವುದೇ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ. ನಾನು ತುಂಬಾ ಚಿಕ್ಕವನಾಗಿದ್ದಾಗಲೇ ಅಜ್ಜಿ ಕೆಂಪಮ್ಮನಿಗೆ ಗಂಡು ಸಂತಾನ ಇಲ್ಲದಿದ್ದರಿಂದ ಅವರ ಮನೆಗೆ ಸಾಕುಮಗನಾಗಿ ಹೋಗಿದ್ದೆ ಎಂದರೆ ಸರಿ. ನಾನು ಸಾಕುಮಗನಾಗಿ ಹೋದ ಸಮಯದಿಂದ ಇಲ್ಲಿಯವರೆಗೂ ನನಗೂ ಮತ್ತು ಪ್ರತಿವಾದಿಗಳಿಗೂ ರಕ್ತ ಸಂಬಂಧ ಬಿಟ್ಟು ಬೇರೆ ರೀತಿಯ ಸಂಬಂಧಗಳು ಇಲ್ಲವೆಂದರೆ ಜಮೀನುಗಳನ್ನು ಎಲ್ಲರೂ ಒಟ್ಟಾಗಿಯೇ ಸಾಗುವಳಿ ಮಾಡುತ್ತಿದ್ದೇವೆ.

ನಾನು ಪ್ರತಿವಾದಿಗಳ ಜೊತೆ ಒಟ್ಟು ಕುಟುಂಬದಲ್ಲಿ ಸದಸ್ಯನಾಗಿ ವಾಸಮಾಡಿದ ಬಗ್ಗೆ ಮತ್ತು ಜಂಟಿಯಾಗಿ ದಾವಾ ಸ್ವತ್ತುಗಳನ್ನು ಸಾಗುವಳಿ ಮಾಡುತ್ತಿರುವ ಬಗ್ಗೆ ಯಾವುದಾದರೂ ದಾಖಲೆಗಳನ್ನು ಹಾಜರುಮಾಡಿದ್ದೀನಾ ಎಂದರೆ ವಂಶವೃಕ್ಷವನ್ನು ಹಾಜರುಮಾಡಿದ್ದೇನೆ. ವಂಶವೃಕ್ಷ ಬಿಟ್ಟರೆ ಪಡಿತರ ಚೀಟಿ, ಮತದಾರರ ಪಟ್ಟಿ , ಚುನಾವಣಾ ಗುರುತಿನ ಚೀಟಿ ಇತ್ಯಾದಿ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ. ವಂಶವೃಕ್ಷವು ಒಬ್ಬ ವ್ಯಕ್ತಿ ಒಟ್ಟು ಕುಟುಂಬದಲ್ಲಿ ವಾಸಮಾಡುವುದಕ್ಕೆ ರುಜುವಾತಲ್ಲ ಎಂದರೆ ಸರಿ. ನನ್ನ ಬಳಿ ಪಡಿತರ ಚೀಟಿ ಇದೆ ಎಂದರೆ ಸರಿ. ಆ ಚೀಟಿಯಲ್ಲಿ ನನ್ನ ಹೆಂಡತಿ , ಮಕ್ಕಳು ಮತ್ತು ನನ್ನ ಹೆಸರುಗಳು ಜಂಟಿಯಾಗಿ ನಮೂದಾಗಿವೆ ಎಂದರೆ ಸರಿ. ನಾವು ಪ್ರತ್ಯೇಕವಾಗಿ ವಾಸ ಮಾಡುತ್ತಿರುವುದರಿಂದ ನಮ್ಮ ಕುಟಂಬಕ್ಕೆ ಪ್ರತ್ಯೇಕ ಪಡಿತರ ಚೀಟಿ ಕೊಟ್ಟಿದ್ದಾರೆ ಎಂದರೆ ಸರಿ. ನಾನು ಹೆಂಡತಿ ಮಕ್ಕಳ ಜೊತೆ ಬೇರೆ ವಾಸಮಾಡುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿಗಳೂ ಕೂಡ ಕಳೆದ 20 ವರ್ಷಗಳಿಂದ ಬೇರೆ ಬೇರೆಯಾಗಿ ವಾಸಮಾಡುತ್ತಿದ್ದಾರೆ ಎಂದರೆ ಎಲ್ಲರೂ ಬೇರೆ ಬೇರೆಯಾಗಿ ವಾಸಮಾಡುತ್ತಿದ್ದೇವೆ.

ಕೆಂಪಮ್ಮನಿಗೆ ಸರ್ವೆ ನಂಃ 261ಃ1 ರಲ್ಲಿ ಒಂದು ಎಕರೆ 36 ಗುಂಟೆ ಜಮೀನು ಇದೆ ಎಂದರೆ ಸರಿ. ಸ.ನಂಃ 728 ರಲ್ಲಿ ಆಕೆಗೆ 3 ಗುಂಟೆ ಹಿತ್ತಲಿನ ಜಾಗವಿದೆ ಎಂದರೆ ಸರಿ. ಯರಿಯೂರಿನಲ್ಲಿ ಕೆಂಪಮ್ಮನಿಗೆ 37x37 ಅಡಿಗಳ ಆರ್‌ಸಿಸಿ ಮನೆ ಇದೆ ಎಂದರೆ ಸರಿ. ಆ ಮನೆಯಲ್ಲೇ ನಾನು ವಾಸಮಾಡುತ್ತಿದ್ದೇನೆ ಎಂದರೆ ಸರಿ. ಆ ಮನೆಗೆ ಲಗತ್ತಾಗಿ ಕೆಂಪಮ್ಮನಿಗೆ ಖಾಲಿ ಜಾಗ ಕೂಡ ಇದೆ ಎಂದರೆ ಸರಿ.

ನನ್ನ ಪರವಾಗಿ ಮೇಲೆ ಹೇಳಿದ ಈ ಆಸ್ತಿಗಳ ಕುರಿತು ಕೆಂಪಮ್ಮನಾಗಲೀ ಆಕೆಯ ಮಗಳಾಗಲೀ ನನಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸರಿ. ಕೆಂಪಮ್ಮನ ಮರಣಾ ನಂತರ ಮತ್ತು ನನ್ನ ತಾಯಿಯ ಮರಣಾ ನಂತರ ಸದರಿ ಆಸ್ತಿಗಳಲ್ಲಿ ಪ್ರತಿವಾದಿಗಳಿಗೂ ವಿಭಾಗದ ಹಕ್ಕು ಬರುತ್ತವೆ ಎಂದರೆ ಪ್ರತಿವಾದಿಗಳು ನೀನೇ ಖಾತೆ ಮಾಡಿಸಿಕೋ ಎಂದು ಸಹಿ ಮಾಡಿಕೊಟ್ಟಿದ್ದಾರೆ. ಪ್ರತಿವಾದಿಗಳು ಆ ರೀತಿ ಯಾವುದೇ ಸಹಿಗಳನ್ನು ಮಾಡಿಲ್ಲ ಎಂದರೆ ಮಾಡಿದ್ದಾರೆ. ನಾನು ಅವರು ಸಹಿ ಮಾಡಿರುವ ದಾಖಲೆಗಳನ್ನು ಹಾಜರುಮಾಡಿದ್ದೇನೆ. ಅವರು ಸಹಿ ಮಾಡದಿದ್ದರೂ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ಹೆಸರಿಗೆ ಸುಳ್ಳು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಂಪಮ್ಮನಿಗೆ ಸೇರಿವೆ ಎಂದು ಒಪ್ಪಿರುವ ಮೂರು ಆಸ್ತಿಗಳನ್ನೂ ಈ ದಾವೆಗೆ ಸೇರ್ಪಡೆ ಮಾಡಿಲ್ಲ ಎಂದರೆ ಸರಿ.

ನನ್ನ ತಂದೆಯ ತಂದೆ ಹೆಸರು ಪೆದ್ದಯ್ಯ ಎಂದರೆ ಸರಿ. ಪೆದ್ದಯ್ಯನ ಹೆಂಡತಿ ಹೆಸರು ಲಕ್ಷ್ಮಮ್ಮ ಎಂದರೆ ಸರಿ. ನನ್ನ ತಾತ ಮತ್ತು ಅಜ್ಜಿಗೆ ನಾನು ಮತ್ತು ನಂಜಮ್ಮ ಇಬ್ಬರೇ ಮಕ್ಕಳು ಎಂದರೆ ಸರಿ. ನನ್ನ ತಂದೆಗೆ ಅವರ ತಂದೆಯ ಕುಟುಂಬದಿಂದ ಬಂದಂತಹ ಯಾವುದೇ ಆಸ್ತಿಗಳೂ ಇರಲಿಲ್ಲ ಎಂದರೆ ಸರಿ. ದಾವಾ ಐಟಂ ನಂಃ 4 ನ್ನು ನನ್ನ ಅಜ್ಜಿ ಲಕ್ಷ್ಮಮ್ಮನಿಗೆ ಆಕೆಯ ತಂದೆಯ ಕುಟುಂಬದಿಂದ ಕೊಡಲಾಗಿತ್ತು ಎಂದರೆ ಸರಿ. ನನ್ನ ಅಜ್ಜಿ ಲಕ್ಷ್ಮಮ್ಮ ಐಟಂ ನಂಃ 4 ನ್ನು ವಿಲ್ ಮೂಲಕ ದಿಃ 24-02-1992 ರಂದು ನನ್ನ ತಂದೆಗೆ ಕೊಟ್ಟಿದ್ದಾರೆ ಎಂದರೆ ಲಕ್ಷ್ಮಮ್ಮ ತೀರಿಕೊಂಡ ನಂತರ ನನ್ನ ತಂದೆ ಖಾತೆ ಮಾಡಿಸಿಕೊಂಡಿದ್ದಾರೆ. ಲಕ್ಷ್ಮಮ್ಮ ನನ್ನ ತಂದೆ ಹೆಸರಿಗೆ ವಿಲ್ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ 4ನೇ ಐಟಂ ಸ್ವತ್ತು ನನ್ನ ತಂದೆಗೆ ಅಜ್ಜಿಯಿಂದ ಬಂದ ಸ್ವಯಾರ್ಜಿತ ಆಸ್ತಿ ಎಂದರೆ ಸರಿ.

ನನ್ನ ತಂದೆಗೆ ದಾವಾ ಸ್ವತ್ತುಗಳಲ್ಲಿ ಯಾವ ಯಾವ ಸ್ವತ್ತು ಯಾವ ಯಾವ ಇಸವಿಗಳಲ್ಲಿ ಸರ್ಕಾರದಿಂದ ಮಂಜೂರಾದವು ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದಿಂದ ಮಂಜೂರಾದ ಬಗ್ಗೆ ದಾಖಲೆ ಹಾಜರುಮಾಡಿದ್ದೇನೆ. ಗ್ರ್ಯಾಂಟ್ ಸರ್ಟಿಫಿಕೇಟ್ ಹಾಜರುಮಾಡಿಲ್ಲ ಎಂದರೆ ಸರಿ. ದಾವಾ 1ನೇ ಸ್ವತ್ತನ್ನು 2ನೇ ಪ್ರತಿವಾದಿ ತನ್ನ ಸ್ವಂತ ಹಣ ಕೊಟ್ಟು ದಿಃ 27-03-2004 ರಂದು ಖರೀದಿ ಮಾಡಿದ್ದಾರೆ ಎಂದರೆ ಸರಿ. ದಾವಾ 5ನೇ ಸ್ವತ್ತನ್ನೂ ಕೂಡ 2ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ 2ನೇ ಸ್ವತ್ತನ್ನು 1 ಮತ್ತು 2ನೇ ಪ್ರತಿವಾದಿ ದಿಃ 05-07-1989 ರ ಕ್ರಯಪತ್ರದಂತೆ ಸ್ವಂತ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ

ಸರಿಯಲ್ಲ. ದಾವಾ 3ನೇ ಸ್ವತ್ತು ನನ್ನ ತಂದೆಗೆ ನಾನು ಚಿಕ್ಕವನಿದ್ದಾಗಲೇ ಸರ್ಕಾರದಿಂದ ಮಂಜೂರಾದ ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ.

ದಾವಾ ಸ್ವತ್ತುಗಳ ಬಗ್ಗೆ ಪ್ರತಿವಾದಿಗಳು ದಿಃ 27-05-2000 ರಂದು ಪಂಚಾಯಿತಿ ಪಾಲುವಿಭಾಗ ಮಾಡಿಕೊಂಡು ಆ ಬಗ್ಗೆ ಪಂಚಾಯಿತಿ ವಿಭಾಗ ಪತ್ರ ಕೂಡ ಇದೆ ಎಂದರೆ ಸಾಕ್ಷಿಯು ಅವರು ಭಾಗಮಾಡಿಕೊಂಡಿದ್ದಾರೆ ನನ್ನ ತಮ್ಮ ಒಬ್ಬನಿದ್ದ ಅವನು ಮೃತಪಟ್ಟಿದ್ದಾನೆ ಎನ್ನುತ್ತಾರೆ. ಸದರಿ ವಿಭಾಗ ಪತ್ರ ಆದ ದಿನಾಂಕದಿಂದಲೂ ಪ್ರತಿವಾದಿಗಳು ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ 6 ರಿಂದ 9ನೇ ಸ್ವತ್ತುಗಳಲ್ಲಿ 2 ಮತ್ತು 3ನೇ ಪ್ರತಿವಾದಿಗಳು ವಿಭಾಗವಾದ ನಂತರ ಸರ್ಕಾರದಿಂದ ಹಣ ಸಹಾಯ ಪಡೆದು ಮನೆಗಳನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಅವರು ವಾಸಮಾಡುತ್ತಿರುವುದು ನಿಜ.

ಕೆಂಪಮ್ಮನ ಸ.ನಂಃ 261ಃ1 ರ ಖಾತೆಯನ್ನು ನನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದೇನೆ ಎಂದರೆ ಸರಿ. ನಂತರ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ಅದರ ಖಾತೆಯನ್ನು ನನ್ನ ಹೆಂಡತಿಯ ಹೆಸರಿಗೆ ಬದಲಾಯಿಸಿದ್ದೇನೆ ಎಂದರೆ ಹೆಂಡತಿ ಹೆಸರಿಗೆ ಬದಲಾಯಿಸಿರುವುದು ನಿಜ. ಅದಾದ ನಂತರ ಆ ಸ್ವತ್ತನ್ನು ಹನುಮಯ್ಯ ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಆ ಸ್ವತ್ತನ್ನು ಮಾರಾಟ ಮಾಡಲು ನಾನು ಪ್ರ2ವಾದಿಗಳ ಒಪ್ಪಿಗೆ ಮತ್ತು ಸಹಿಗಳನ್ನು ಪಡೆದಿರಲಿಲ್ಲ ಎಂದರೆ ಸರಿ. ಕೆಂಪಮ್ಮನ 3 ಗುಂಟೆ ಹಿತ್ತಲಿನ ಜಾಗಕ್ಕೆ ಒಂದು ಗುಂಟೆಗೆ 50 ರಿಂದ 60 ಸಾವಿರ ಬೆಲೆ ಇದೆ ಎಂದರೆ 6-7 ಸಾವಿರ ಬೆಲೆ ಇರಬಹುದು ನಾನು ಕಡಿಮೆ ಬೆಲೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 3 ಗುಂಟೆಯನ್ನೂ ಕೂಡ ನಾನು ಬಸವಯ್ಯನಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಮೂರು ಗುಂಟೆ ಮಾರಾಟ ಮಾಡುವಾಗಲೂ ನಾನು ಪ್ರತಿವಾದಿಗಳ ಒಪ್ಪಿಗೆ ಮತ್ತು ಸಹಿಗಳನ್ನು ಪಡೆದಿರಲಿಲ್ಲ ಎಂದರೆ ಸರಿ.

ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳುವಾಗ 1 ಎಕರೆ 4 ಗುಂಟೆ ಜಮೀನಿನಲ್ಲಿ 24 ಗುಂಟೆಯನ್ನು ನನ್ನ ತಂದೆಯ ಜೀವನಾಂಶಕ್ಕೆ ಬಿಟ್ಟು ಉಳಿದ 20 ಗುಂಟೆಯನ್ನು ನನ್ನ ತಂಗಿ 4ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸರಿ. ನನ್ನ ತಂದೆ ತನ್ನ 24 ಗುಂಟೆಯನ್ನು ಅವರ ಪೋಷಣೆ ಮಾಡಿ ಕಾರಣ 2ನೇ ಪ್ರತಿವಾದಿಗೆ ವಿಲ್ ಮೂಲಕ ಕೊಟ್ಟಿದ್ದಾರೆ ಎಂದರೆ ವಿಲ್ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಳ್ಳಿಗಳಲ್ಲಿ ಒಟ್ಟು ಕುಟುಂಬದಲ್ಲಿ ವಾಸಮಾಡುವಾಗ ಸದಸ್ಯರ ನಡುವೆ ಜಗಳ ಬರಬಾರದು ಎಂಬ ಉದ್ದೇಶದಿಂದ ಆಸ್ತಿ ಖರೀದಿ ಮಾಡುವಾಗ ತಂದೆಯ ಹೆಸರಿನಲ್ಲಿ ಖರೀದಿ ಮಾಡುತ್ತಾರೆ ಎಂದರೆ ಸರಿ. ಒಟ್ಟು ಕುಟುಂಬದ ಪರವಾಗಿ ಆಸ್ತಿ ಖರೀದಿ ಮಾಡುವಾಗ ತನ್ನ ಹೆಸರಿನಲ್ಲೇ ಖರೀದಿ ಮಾಡುತ್ತಾರೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿ ತನ್ನ ಸ್ವಾಧೀನದಲ್ಲಿರುವ ಆಸ್ತಿಗಳ ಮೇಲೆ ಬ್ಯಾಂಕಿನಿಂದ ಸಾಲಪಡೆದಿದ್ದಾರೆ ಎಂದರೆ ಸರಿ. ನಾನು ಕೆಂಪಮ್ಮನ ಮನೆಗೆ ಸಾಕುಮಗನಾಗಿ ಹೋದ ನಂತರದಿಂದ ನನಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ವಿಧವಾದ ವ್ಯವಹಾರ ಸಂಬಂಧಗಳು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಅವರವರ ಹೆಸರುಗಳಿಗೆ ವಿಭಾಗದ ಪ್ರಕಾರ ಪ್ರತ್ಯೇಕ ಖಾತೆಗಳಾಗಿವೆ ಎಂದರೆ ಕಳ್ಳತನದಿಂದ ಮಾಡಿಸಿಕೊಂಡಿದ್ದಾರೆ. ಅವರು ಕಳ್ಳತನದಿಂದ ಖಾತೆ ಮಾಡಿಸಿಕೊಂಡಿದ್ದಾರೆ ಅದನ್ನು ರದ್ದುಪಡಿಸಿ ಎಂದು ನಾನು ಕಂದಾಯ ಅಪೀಲು ಸಲ್ಲಿಸಿದ್ದೀನಾ ಎಂದರೆ ಸಲ್ಲಿಸಿಲ್ಲ. ನನಗೆ ಕಳ್ಳತನದ ಖಾತೆ ಬಗ್ಗೆ ಗೊತ್ತಿದ್ದರಿಂದ ಅಪೀಲನ್ನು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ನನ್ನ ತಂದೆ ಆತನ 24 ಗುಂಟೆ ನನಗೇ ಕೊಡುತ್ತೇನೆ ಅವರ ಹತ್ತಿರ ಜಗಳ ಮಾಡಬೇಡ ಎಂದು ಹೇಳಿದ್ದರಿಂದ ಅಪೀಲು ಹಾಕಲಿಲ್ಲ. 2000 ಇಸವಿಯಿಂದ ಇಲ್ಲಿಯವರೆಗೆ ಪ್ರತಿವಾದಿಗಳ ನಡುವೆ ಆಗಿರುವ ವಿಭಾಗ ಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ನಾನು ಪ್ರಶ್ನಿಸಿಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳಲ್ಲಿ ನನಗೆ ಹಕ್ಕು ಬರುವುದಿಲ್ಲ ಕೇವಲ ಕೆಂಪಮ್ಮನ ಆಸ್ತಿಗಳಲ್ಲಿ ಮಾತ್ರ ನನಗೆ ಹಕ್ಕು ಇರುತ್ತದೆ ಎಂದು ಮಾತುಕತೆಯಾದ ನಂತರವೇ ನನ್ನನ್ನು ಕೆಂಪಮ್ಮನ ಮನೆಗೆ ಸಾಕುಮಗನಾಗಿ ಕಳುಹಿಸಲಾಗಿತ್ತು ಎಂದರೆ ಆ ರೀತಿ ಮಾತುಕತೆಯಾಗಿರಲಿಲ್ಲ. ಅದು ಗೊತ್ತಿದ್ದರೂ ನಾನು ನನ್ನ ಮಕ್ಕಳ ಒತ್ತಡದಿಂದ ಪ್ರತಿವಾದಿಗಳ ಭಾಗದಲೂ ಆಸ್ತಿ ಪಡೆಯಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಈಗಾಗಲೇ ಪ್ರತಿವಾದಿಗಳ ನಡುವೆ ದಾವಾ ಸ್ವತ್ತುಗಳು ವಿಭಾಗವಾಗಿರುವ ಕಾರಣ ಸದರಿ ವಿಭಾಗವನ್ನು ಪ್ರಶ್ನಿಸದೇ ಇರುವುದರಿಂದ ಮತ್ತೆ ಪಾಲುವಿಭಾಗ ಕೋರಲು ನನಗೆ ಅರ್ಹತೆ ಇಲ್ಲಾ ಎಂದರೆ ಸರಿಯಲ್ಲ. ನಾನು ಕಳೆದ 45 ವರ್ಷಗಳಿಂದ ಪ್ರತಿವಾದಿಗಳ ಕುಟುಂಬದಿಂದ ಬೇರೆಯಾಗಿ ವಾಸಮಾಡುತ್ತಿರುವುದರಿಂದ ನಾನು ಪಾಲುವಿಭಾಗ ಕೇಳುವ ಹಕ್ಕನ್ನು ಕಳೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನೇ ಹಾಜರುಪಡಿಸಿದ ನಿಪಿಃ 1 ರಿಂದ ನಿಪಿಃ 13 ದಾಖಲೆಗಳು ಪ್ರತಿವಾದಿಗಳು ಈಗಾಗಲೇ ವಿಭಾಗ ಮಾಡಿಕೊಂಡಿರುವುದನ್ನು ರುಜುವಾತುಮಾಡುತ್ತವೆ ಎಂದರೆ ಸರಿಯಲ್ಲ. ಹಕ್ಕುಹಿತಾಸಕ್ತಿ ಇಲ್ಲದಿದ್ದರೂ ಅಕ್ರಮಲಾಭ ಗಳಿಸಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.